ಶರಾವತಿ ಪಂಪ್ಡ್ ಸ್ಟೋರೇಜ್ ಯೋಜನೆಯ ಮೂಲಕ ಸರ್ಕಾರ ತನ್ನ ಮಿತಿಯನ್ನು ಮೀರುತ್ತಿದೆ ಎಂದು ಜನ ಎತ್ತಿ ತೋರಿಸಿ ಹೇಳುತ್ತಿದ್ದಾರೆ.

ಈ ಯೋಜನೆ ಏಕೆ ಬೇಡ? ಇದರಿಂದ ಆಗುವ ಹಾನಿ ಎಷ್ಟು? ಹವಾಗುಣ ತುರ್ತುಪರಿಸ್ಥಿತಿಯಲ್ಲಿ ಈ ಯೋಜನೆಯಿಂದಾಗುವ ಪ್ರತ್ಯಕ್ಷ ಮತ್ತು ನೇರ ಹಾನಿ ಯಾವ ಸ್ವರೂಪದ್ದು? ಹೊನ್ನಾವರ ಭಾಗದ ಜನರ ಮೇಲೆ ಆಗುವ ದುಷ್ಪರಿಣಾಮಗಳೇನು? ಇವೆಲ್ಲವನ್ನೂ ಸರ್ಕಾರ ಯೋಚಿಸಬೇಕಿದೆ.

## ಯೋಜನೆ ಏಕೆ ಬೇಡ?

1916ರಲ್ಲಿ ಸರ್. ಎಂ. ವಿಶ್ವೇಶ್ವರಯ್ಯನವರು ಜೋಗಕ್ಕೆ ಭೇಟಿ ನೀಡಿದಾಗ 'ಓಹ್! ಎಂತಹ ಅದ್ಭುತ ವ್ಯರ್ಥ!' ಎಂದು ಉದ್ಗರಿಸಿದ್ದರು. ತದನಂತರ, ಲಿಂಗನಮಕ್ಕಿ ಅಣೆಕಟ್ಟು ನಿರ್ಮಾಣದ ನಂತರದಲ್ಲೂ ನದಿಯಲ್ಲಿ ಹರಿಯುವ ನೀರಿನ ಪ್ರಮಾಣ ಶೇ. 60ರಷ್ಟಾದರೂ ಇರಬೇಕು ಎಂದು ಹೇಳಿದ್ದರು. ಶರಾವತಿ ನದಿಯ ಭಾಗಶಃ ನೀರನ್ನು ವಿದ್ಯುತ್ ಬಳಕೆಗೆ ಬಳಸುವುದರ ಜೊತೆಗೆ ನದಿಯ ನೀರು ಸಮುದ್ರವನ್ನು ಸೇರಬೇಕು, ಸಮುದ್ರ ಸೇರುವ ಪೂರ್ವದಲ್ಲಿ ನದಿಯೊಂದರಿಂದ ಲಭ್ಯವಾಗುವ ನೈಸರ್ಗಿಕ ಸೇವೆಗಳು ಮನುಷ್ಯರೂ ಸೇರಿದಂತೆ ಇನ್ನಿತರ ಜೀವಿವೈವಿಧ್ಯಕ್ಕೆ ಲಭ್ಯವಾಗಬೇಕು ಎಂಬ ಕಳಕಳಿ ಅವರಿಗಿತ್ತು. ಆದರೆ, ಈಗಿನ ಎಂಜಿನಿಯರ್‌ಗಳಿಗಾಗಲೀ ಅಥವಾ ಯೋಜನೆಯನ್ನು ಮಂಜೂರು ಮಾಡಿಸುವ ಹೊಣೆ ಹೊತ್ತ ಅಧಿಕಾರಸ್ಥರಿಗಾಗಲೀ ನದಿಯ ಹರಿವಿನ ಕುರಿತ ಕಾಳಜಿಗಳಿಲ್ಲ. ಆದ್ದರಿಂದ, 'ನದಿ ನೀರು ಸಮುದ್ರ ಸೇರಿ ವ್ಯರ್ಥ'ವಾಗುತ್ತದೆ ಎಂದು ಪದೇ ಪದೇ ಹೇಳುತ್ತಾರೆ.

ಹವಾಗುಣ ತುರ್ತು ಪರಿಸ್ಥಿತಿಯ ಕಾರಣಕ್ಕೆ ಮಳೆಯ ಆವರ್ತನದಲ್ಲಿ ಏರುಪೇರಾಗುತ್ತಿದೆ. ವಾರದಲ್ಲಿ ಸುರಿಯುವ ಮಳೆ ಪ್ರಮಾಣ ಒಂದರ್ಧ ಗಂಟೆಯಲ್ಲಿ ಸುರಿಯುತ್ತಿದೆ. ಮೇಘಸ್ಫೋಟದಿಂದ ಕಾಡು ಕಳೆದುಕೊಂಡ ಗುಡ್ಡಗಳು ದಿಢೀರ್ ಕುಸಿಯುವ ವಿದ್ಯಮಾನ 2018ರಿಂದಲೂ ಘಟಿಸುತ್ತಲೇ ಇದೆ. ಉತ್ತರ ಕನ್ನಡದ ಕಳಚೆ, ಅಂಕೋಲ, ಚಿಕ್ಕಮಗಳೂರು, ಶೃಂಗೇರಿ, ಕೊಪ್ಪ, ಶಿವಮೊಗ್ಗ ಭಾಗದಲ್ಲಿ ಎಲ್ಲೆಲ್ಲಿ ಮಾನವ ಮತ್ತು ಯಂತ್ರಗಳ ಹಸ್ತಕ್ಷೇಪವಾಗಿದೆಯೋ ಅಲ್ಲೆಲ್ಲ ಗುಡ್ಡ ಕುಸಿತಗಳು ಸಂಭವಿಸಿವೆ. ಹಿಂದಿನ ಐದು ವರ್ಷಗಳಲ್ಲಿ ಪಶ್ಚಿಮಘಟ್ಟದಲ್ಲಿ 5000ಕ್ಕೂ ಹೆಚ್ಚು ಪ್ರದೇಶದಲ್ಲಿ ಭೂಕುಸಿತವಾಗಿದೆ.

'ಶರಾವತಿ ಪಂಪ್ಡ್ ಸ್ಟೋರೇಜ್ ಯೋಜನೆಯು ಅತ್ಯಂತ ಪರಿಸರಸ್ನೇಹಿ ಯೋಜನೆ. ಇದರಿಂದ ಪರಿಸರಕ್ಕೆ ಯಾವುದೇ ಅಪಾಯವಿಲ್ಲ' ಎಂದು ಕೆಪಿಸಿಎಲ್ ಪ್ರತಿಪಾದಿಸುತ್ತದೆ. ಈ ಯೋಜನೆಯು ಏಷ್ಯಾದಲ್ಲೇ ದೊಡ್ಡ ಯೋಜನೆಯಾಗಿದ್ದು, ನಾಗರಿಕ ಸಮಾಜಕ್ಕೆ ಅಗತ್ಯವಿರುವ ವಿದ್ಯುತ್ತನ್ನು ಪೂರೈಸಲು ಯೋಜನೆ ಸಹಕಾರಿ ಎಂದು ಹೇಳಲಾಗುತ್ತಿದೆ. ಆದರೆ, ವಾಸ್ತವ ಬೇರೆಯದೇ ಇದೆ.

ಸಾಗರ ತಾಲ್ಲೂಕಿನ ಹೆನ್ನಿ ಎಂಬ ಊರಿನಲ್ಲಿ ಒಂದು ಸುರಂಗವನ್ನು ಕೊರೆಯಲಾಗುವುದು. ಸುರಂಗದ ಸುತ್ತಳತೆ ಎಷ್ಟಿರುತ್ತದೆ ಎಂಬುದನ್ನು ಇದುವರೆಗೂ ಕೆಪಿಸಿಎಲ್ ಬಹಿರಂಗಪಡಿಸಿಲ್ಲ. ಆದರೆ, ಗೇರುಸೊಪ್ಪೆಯಿಂದ ತಲಕಳಲೆ ಅಣೆಕಟ್ಟಿಗೆ ನೀರನ್ನು ಎತ್ತಿ ತರಲು ಹಾಗೂ ಅದೇ ನೀರನ್ನು ಬಳಸಿಕೊಂಡು ವಿದ್ಯುತ್ ಉತ್ಪಾದಿಸಲು 250 ಮೆ.ವ್ಯಾ. ಸಾಮರ್ಥ್ಯದ 8 ಟರ್ಬೈನ್‌ಗಳನ್ನು ಅಳವಡಿಸಲಾಗುವುದು ಎಂದು ಹೇಳಿಕೊಂಡಿದೆ. ಅಂದರೆ, ಸುಮಾರು 40–50 ಅಡಿ ಸುತ್ತಳತೆಯ ಟರ್ಬೈನ್‌ಗಳನ್ನು ಸುರಂಗದ ಒಳಗೆ ತೆಗೆದುಕೊಂಡು ಹೋಗಿ, ಉತ್ತರ ಕನ್ನಡ ಜಿಲ್ಲೆಯ ವ್ಯಾಪ್ತಿಯಲ್ಲಿ ಬರುವ ಬೆಗೋಡಿ ಗುಡ್ಡದ ಆಳದಲ್ಲಿ ಸ್ಥಾಪಿಸಲಾಗುವುದು. ಸುರಂಗ ಕೊರೆತದಿಂದ ಉತ್ಪಾದನೆಯಾಗುವ ಅಪಾರ ಪ್ರಮಾಣದ ಮಣ್ಣು–ಕಲ್ಲುಗಳನ್ನು ನದಿ ಪಾತ್ರದಲ್ಲಿಯೇ ಹಾಕಲಾಗುತ್ತದೆ.

### 'ಅಳಿವೆ'ಗೂ ಸಂಚಕಾರ

ನದಿಯೊಂದು ಸಮುದ್ರವನ್ನು ಸೇರುವ ಪ್ರದೇಶಕ್ಕೆ ಅಳಿವೆ ಎಂದು ಕರೆಯಲಾಗುತ್ತದೆ. ಇಂತಹ ಅಳಿವೆ ಪ್ರದೇಶಗಳನ್ನು ಸಮುದ್ರದ ನರ್ಸರಿಯೆಂದು ಕರೆಯಲಾಗುತ್ತದೆ. ಕಡಿಮೆ ಅಥವಾ ಹದವಾದ ಲವಣಾಂಶವಿರುವ ಈ ಪ್ರದೇಶದಲ್ಲಿ ಅನೇಕ ರೀತಿಯ ಕಿರುಜಲಜೀವಿಗಳಿರುತ್ತವೆ. ಈ ಕಿರುಜಲಜೀವಿಗಳೇ ಅನೇಕ ಪ್ರಭೇದದ ಮೀನು ಮರಿಗಳಿಗೆ ಆಹಾರವಾಗುತ್ತವೆ. ಆದ್ದರಿಂದಲೇ ಮೀನುಗಳು ಈ ಪ್ರದೇಶದಲ್ಲಿ ಬಂದು ಮೊಟ್ಟೆಯಿಡುತ್ತವೆ. ಕಡಿಮೆ ಲವಣಾಂಶ ಪ್ರದೇಶ, ಮಧ್ಯಮ ಲವಣಾಂಶ ಪ್ರದೇಶ ಹಾಗೂ ಗರಿಷ್ಠ ಲವಣಾಂಶ ಪ್ರದೇಶಗಳು ಸಮುದ್ರದಲ್ಲಿರುತ್ತವೆ. ಅಳಿವೆ ಪ್ರದೇಶದ ಕಡಿಮೆ ಲವಣಾಂಶ ಪ್ರದೇಶವು ಹಲವು ಮತ್ಸ್ಯ ಸಂತತಿಗಳ ನರ್ಸರಿಯಾಗಿದ್ದು, ನದಿಯ ಸಿಹಿನೀರು ಅಳಿವೆಯ ಉಳಿವಿಗೆ ಅತಿ ಅವಶ್ಯವಾಗಿದೆ.

ಶರಾವತಿ ತಪ್ಪಲಿನಿಂದ ಸೋಸಿಕೊಂಡು ಬಂದ ಮರಳು ಅಳಿವೆಯ ಹಿಂಭಾಗದ ಪ್ರದೇಶದಲ್ಲಿ ಶೇಖರಣೆಯಾಗುತ್ತದೆ. ಈ ಮರಳು ಉತ್ಕೃಷ್ಟ ಮಟ್ಟದ್ದಾಗಿದ್ದು, ಕಟ್ಟಡ ನಿರ್ಮಾಣದಲ್ಲಿ ಬಳಕೆಯಾಗುತ್ತದೆ. ಅನೇಕ ಕಟ್ಟಡ ಕಾರ್ಮಿಕರ ಬದುಕು ಮರಳಿನ ಮೇಲೆ ಅವಲಂಬಿಸಿದೆ. ಗೇರುಸೊಪ್ಪ ಅಣೆಕಟ್ಟನ್ನು ಸೇರಿದಂತೆ, ಹಿಂದಿನ ಎಲ್ಲಾ ವಿದ್ಯುದಾಗಾರಗಳ ಟರ್ಬೈನುಗಳಿಂದ ಹೊರಬರುವ ಕೀಲೆಣ್ಣೆ ನೀರಿಗೆ ಸೇರುತ್ತದೆ. ನೀರಿನೊಂದಿಗೆ ವಿಲೀನವಾದ ಕಿಲುಬೆಣ್ಣೆಯು ಅಳಿದುಳಿದ ಜಲಜೀವರಾಶಿಗಳಿಗೆ, ಕೆಳಗಿನ ಕಿರುರೈತರಿಗೆ ಅಪಾಯಕಾರಿಯಾಗಿ ಪರಿಣಮಿಸುತ್ತಿದೆ. ಈ ರೀತಿಯ ಜಲಮಾಲಿನ್ಯದ ಕುರಿತಾಗಿ ಕಿಂಚಿತ್ತೂ ಕೆಪಿಸಿಎಲ್ ತಲೆಕೆಡಿಸಿಕೊಂಡಿಲ್ಲ.

ಪಂಪ್ಡ್ ಸ್ಟೋರೇಜ್ ಘಟಕವನ್ನು ಸ್ಥಾಪಿಸಲಾಗುವ ಪ್ರದೇಶವನ್ನು ರಾಷ್ಟ್ರೀಯ ವಿಪತ್ತು ನಿರ್ವಹಣಾ ಮಂಡಳಿ 'ಸೂಕ್ಷ್ಮ ಪ್ರದೇಶ'ವೆಂದು ಗುರುತಿಸಿದೆ. ಅಂದರೆ, ಅಲ್ಲಿ ಗುಡ್ಡ ಕುಸಿಯುವ ಅಪಾಯವಿದೆ. ಸರಿ, ಎಲ್ಲಾ ತರಹದ ಅಡ್ಡಿ, ಅಡೆತಡೆಗಳನ್ನು ಮೀರಿ ಪಂಪ್ಡ್ ಸ್ಟೋರೇಜ್ ಘಟಕ ಸ್ಥಾಪನೆಗೆ ಮುಂದಾದರು ಎಂದಿಟ್ಟುಕೊಳ್ಳಿ; ಗುಡ್ಡದ ಆಳದಲ್ಲಿ ಸೃಷ್ಟಿಯಾಗುವ ಬೃಹತ್ ಟೊಳ್ಳು ಪ್ರದೇಶವು ಕುಸಿಯದಂತೆ ಭದ್ರ ಮಾಡುವ ಬಗೆ ಹೇಗೆ? ಶರಾವತಿ ಸಿಂಗಳೀಕ ಅಭಯಾರಣ್ಯದ ಕೇಂದ್ರಭಾಗದಲ್ಲಿಯೇ ಒಂದು ಕಲ್ಲು ಗುಡ್ಡವನ್ನು ಗುರುತಿಸಲಾಗಿದ್ದು, ಕಣಿವೆಯಲ್ಲಿರುವ ಕಲ್ಲು–ಜಲ್ಲಿಗಳನ್ನು ಬಳಸಿಯೇ ಯೋಜನಾ ಪ್ರದೇಶವನ್ನು ಭದ್ರ ಮಾಡಬೇಕು. ಬೃಹತ್ ಬಂಡೆಗಳನ್ನು ಪುಡಿ ಮಾಡಲು ಡೈನಮೈಟ್ ಸಿಡಿಸುವುದು ಅನಿವಾರ್ಯ. ಇವುಗಳನ್ನು ಹೊತ್ತು ತರಲು ಬೃಹತ್ ಯಂತ್ರಗಳೇ ಬೇಕು. ಕಡಿದಾದ ಕಣಿವೆಯಲ್ಲಿ ಸಾಗಲು ದೊಡ್ಡ ದೊಡ್ಡ ಲಾರಿಗಳು ಬೇಕು. ಶರಾವತಿ ಸಿಂಗಳೀಕ ಅಭಯಾರಣ್ಯದ ಕೇಂದ್ರಸ್ಥಾನದಲ್ಲೇ ರಸ್ತೆಯನ್ನು ನಿರ್ಮಿಸಿಕೊಳ್ಳಬೇಕು. ಕಡಿಮೆಯೆಂದರೆ ನೂರು ಅಡಿ ಅಗಲದ ರಸ್ತೆ ಬೇಕಾಗುತ್ತದೆ. ಈಗಿನ ಕಚ್ಚಾ ರಸ್ತೆಯನ್ನು ಅಗಲ ಮಾಡಲು, ರಸ್ತೆಯ ಇಕ್ಕೆಲಗಳಲ್ಲಿನ ಮರಗಳನ್ನು ಕಡಿಯುವುದು ಅನಿವಾರ್ಯ. ಆಗ ಸಿಂಗಳೀಕಗಳನ್ನೊಳಗೊಂಡು ಎಲ್ಲಾ ವನ್ಯಜೀವಿಗಳ ಪಥಗಳು ತುಂಡಾಗುತ್ತವೆ. ಇದಕ್ಕೂ ಒಂದು ಪರಿಹಾರವನ್ನು ಕೆಪಿಸಿಎಲ್ ಕಂಡುಕೊಂಡಿದೆ. ರಸ್ತೆಗೆ ಅಡ್ಡಡ್ಡಲಾಗಿ ಸಿಂಗಳೀಕಗಳಿಗೆ ದಾಟಲು ಅನುಕೂಲವಾಗುವಂತೆ ಕೃತಕ ರಬ್ಬರ್ ಮಾರ್ಗಗಳನ್ನು ನಿರ್ಮಿಸಲಾಗುವುದು ಎನ್ನುತ್ತಾರೆ. ಆದರೆ ಈ ವಿಧಾನ ಯಶಸ್ವಿಯಾದ ಉದಾಹರಣೆ ಕಡಿಮೆ.

ಕೆಲಸಗಾರರಿಗೆ ಉಳಿದುಕೊಳ್ಳಲು ಬೇಕಾಗುವ ತಾತ್ಕಾಲಿಕ ಮನೆಗಳನ್ನು ನಿರ್ಮಿಸುವುದು ಇತ್ಯಾದಿಗಳಿಂದಾಗಿ ಇನ್ನಷ್ಟು ಅರಣ್ಯ ಪ್ರದೇಶ ನಾಶವಾಗುವುದಲ್ಲದೇ, ಮತ್ತಷ್ಟು ವನ್ಯಜೀವಿಗಳ ಪಥ ಛಿದ್ರವಾಗಲಿದೆ. ಈ ಭಾಗದಲ್ಲಿ ಇಷ್ಟು ಪ್ರಮಾಣದ ಮಳೆಕಾಡು ನಾಶವು ನದಿ ಪಾತ್ರದ ಮೇಲೆ ವ್ಯತಿರಿಕ್ತ ಪರಿಣಾಮ ಬೀರಲಿದೆ.

ಉಚ್ಚ ನ್ಯಾಯಾಲಯದ ನಿರ್ಬಂಧವಿದ್ದರೂ, 2019ರ ಮಳೆಗಾಲದಲ್ಲಿ ಶರಾವತಿ ಸಿಂಗಳೀಕ ಅಭಯಾರಣ್ಯದ ಉದ್ದೇಶಿತ ಶರಾವತಿ ಪಂಪ್ಡ್ ಸ್ಟೋರೇಜ್ ಯೋಜನಾ ಪ್ರದೇಶದಲ್ಲಿ ಒಟ್ಟು 16 ಬೋರ್‌ಕಿಂಡಿಗಳನ್ನು ಕೊರೆಯಲಾಗಿತ್ತು. ಪರಿಸರಕ್ಕೆ ಹಾನಿಯಾಗಬಲ್ಲ ಯಾವುದೇ ರೀತಿಯ ಅರಣ್ಯೇತರ ಚಟುವಟಿಕೆಗಳಿಗೆ ವನ್ಯಜೀವಿ ಕಾಯ್ದೆ (1972) ನಿರ್ಬಂಧವಿದೆ. ಸ್ಥಳೀಯ ಅರಣ್ಯಾಧಿಕಾರಿಗಳ ಮೇಲೆ ಅಧಿಕಾರಸ್ಥರಿಂದ ಒತ್ತಡ ಹಾಕಿಸಿ, ಈ ಕೆಲಸವನ್ನು ಮಾಡಲಾಗಿತ್ತು. ಈ ಯೋಜನೆಯ 2017ರ ಯೋಜನಾ ಪೂರ್ವ ವರದಿ ಪ್ರಕಾರ ಯೋಜನಾ ವೆಚ್ಚ 4000 ಕೋಟಿಗಳಾಗಿತ್ತು. 2024ರಲ್ಲಿ ಎಂಟು ಸಾವಿರ ಕೋಟಿಯಾಗಿ, 2025ರಲ್ಲಿ ಈ ಮೊತ್ತ ಹತ್ತು ಸಾವಿರ ಕೋಟಿಗೆ ತಲುಪಿದೆ. ಕೆಪಿಸಿಎಲ್ ತಯಾರಿಸಿದ ವಿಸ್ತೃತ ಯೋಜನಾ